ಸಾಕ್ಷಿಯ ಹೆಸರು : ಮೊಹಮ್ಮದ್ ಇಮ್ತಿಯಾಜ್ ಹಮ್ಜಾ ಸಿದ್ಧುಬಡಿ

**ದಿನಾಂಕಃ 11-12-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ- ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ-**

6. ಚಾಸಾ-15 ಹಾಗೂ ಚಾಸಾ-14 ರವರ ಮನೆ ಹತ್ತಿರದಲ್ಲಿರುತ್ತದೆ ಎಂದರೆ ಸಾಕ್ಷಿಯು 4-5 ಮನೆಗಳ ದೂರದಲ್ಲಿದೆ ಎಂದು ನುಡಿಯುತ್ತಾರೆ. ಚಾಸಾ-15 ರವರ ಮನೆಯಲ್ಲಿಯು ಸಹ ಬಟ್ಟೆ ತೊಳೆಯುವ ವ್ಯವಸ್ಥೆ ಇದೆ ಎಂದರೆ ಸಾಕ್ಷಿಯು ವ್ಯವಸ್ಥೆ ಇರುತತದೆ ಆದರೆ ನೀರಿನ ಸಮಸ್ಯೆ ಇದ್ದುದ್ದರಿಂದ ಚಾಸಾ-15 ರವರು ಚಾಸಾ-14 ರವರ ಮನೆಗೆ ಬಟ್ಟೆ ತೊಳೆಯಲು ಹೋಗುತ್ತಿದ್ದರು ಎಂದು ನುಡಿಯುತ್ತಾರೆ. ಜನತಾ ಕಾಲೋನಿ ಯಾವುದೇ ಮನೆಗಳಿಗೆ ನೀರಿನ ಸಮಸ್ಯೆ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ತೆಂಗಿನ ಕಾಯಿ ಸುಲಿಯುವ ಪ್ರತಿಯೊಬ್ಬರ ಮನೆಯಲ್ಲಿ ಸುಲಿಗೆ ಮಣೆ ಇರುತ್ತದೆ ಎಂದರೆ ಸರಿ. ಮೃತ ಅಬುತಾಲೀಬ್ ಕಾಯಿ ಸುಲಿಯುವಾಗ ಆಯಾ ತಪ್ಪಿ ಸುಲಿಗೆ ಮಣೆ ಮೇಲಿ ಬಿದ್ದು ಗಾಯ ಮಾಡಿಕೊಂಡು ನಂತರ ಮೃತ ಪಟ್ಟಿರುತ್ತಾನೆ ಎಂದರೆ ಸರಿಯಲ್ಲ. ಚಾಸಾ-10 ರವರು ತಮ್ಮ ಮೊಬೈಲ್ ನಿಂದ ಘಟನೆಯನ್ನು ವಿಡಿಯೋ ಮಾಡುತ್ತಿದ್ದನ್ನು ನಾನು ನೋಡಿರುವುದಿಲ್ಲ ಹಾಗೂ ಮೊಬೈಲ್ ನಲ್ಲಿದ್ದ ದೃಶ್ಯಾವಳಿಯನ್ನು ಸಹ ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ-7 ನ್ನು ತೋರಿಸಿ, ಯಾವ ಮರದ ದಬ್ಬೆ ಎಂದು ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿಯು ಅಡಿಕೆ ಮರದ ದಬ್ಬೆ ಎಂದು ನುಡಿಯುತ್ತಾರೆ. ಮು.ಮಾ-7 ಅಡಿಕೆ ಮರ ದಬ್ಬೆ ಅಲ್ಲಾ ಎಂದರೆ ಸರಿಯಲ್ಲ. ಆರೋಪಿಯು ಎಂದಿಗೂ ಚಾಕು ಹಿಡಿದುಕೊಂಡು ಓಡಾಡುತ್ತಿರಲಿಲ್ಲ ಎಂದರೆ ಸಾಕ್ಷಿಯು ಸಣ್ಣ ಪುಟ್ಟ ಗಲಾಟೆ ಆದಾಗಲೆಲ್ಲ ಆರೋಪಿಯು ಚಾಕು ಹಿಡಿಕೊಂಡು ಓಡಾಡುತ್ತಿದ್ದ ಎಂದು ನುಡಿಯುತ್ತಾರೆ.

7. ಮು.ಮಾ-2 ಚಾಕುವನ್ನು ಅರೋಪಿಯು ಹಿಡಿದುಕೊಂಡು ಬಂದಿದ್ದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಮು.ಮಾ-2 ಚಾಕು ಚಾಸಾ-21 ರವರ ಮಟನ್ ಅಂಗಡಿಗೆ ಸೇರಿದ್ದು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದು ಆರೋಪಿಯ ಚಾಕು ಎಂದು ನುಡಿಯುತ್ತಾರೆ. ಆಟೋ ಚಾಲನೆ ಮಾಡಲು ನನ್ನ ಬಳಿ ಲೈಸನ್ಸ್ ಇರುತ್ತದೆ. ನನ್ನ ಬಳಿ ಆಟೋ ಚಾಲನೆ ಮಾಡಲು ಲೈಸನ್ಸ್ ಇಲ್ಲದಿದ್ದರೂ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆ ನಂತರ ನಾನು ಅಬುತಾಲೀಬ್ ನ್ನು ನನ್ನ ಆಟೋದಲ್ಲಿ ಕರೆದುಕೊಂಡು

ಹೋಗಿದ್ದೇ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ–11 ಮೋಬೈಲ್ ನಲ್ಲಿ ಕಾಣುವ ದೃಶ್ಯವು ಸೃಷ್ಠ ಮಾಡಲಾದ ದೃಶ್ಯ ಎಂದರೆ ಸರಿಯಲ್ಲ. ಸದರಿ ದೃಶ್ಯಾವಳಿ ಯಲ್ಲಿ ಇರುವಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ. ಮು.ಮಾ–1. 3, 5, 6, 8, 9, 10 ಗಳು ಸ್ಮಶಾನದಲ್ಲಿ ಬಿದ್ದಂತಹ ವಸ್ತುಗಳು ಎಂದರೆ ಸರಿಯಲ್ಲ. ಮೃತ ಅಬುತಾಲೀಬ್ ಆರೋಪಿಯ ಮನೆ ಬಳಿ ವಿಚಾರಿಸಲು ಹೋಗಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸತ್ಯಕ್ಕೆ ದೂರವಾದ ಸಂಗತಿಗಳು ಎಂದರೆ ಸರಿಯಲ್ಲ. ಚಾಸಾ–1, 10, 14, 15 ರವರು ನನಗೆ ಬೇಕಾದವರು ಆದ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ–1, 10, 14, 15 ರವರು ಆರೋಪಿಗೆ ಹೊಡೆಯಲು ಸಂಚು ರೂಪಿಸಿದ್ದರು ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.